**PW-1:** ರಾಮಾಂಜಿನಪ್ಪ

ದಿನಾಂಕಃ **26.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 3, 5 ಮತ್ತು 13ನೇ ಪ್ರತಿವಾದಿಗಳ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ**

1. ನಾನು ಹಾಜರುಪಡಿಸಿರುವ ಕರಾರುಪತ್ರಗಳು ಸ.ನಂ. 25, 30/1, 51/1 ಮತ್ತು 55/1 ಕ್ಕೆ ಸಂಬಂಧಿಸಿರುತ್ತವೆ. ನಾನು ಹಾಜರುಪಡಿಸಿರುವ 7 ಕರಾರುಪತ್ರಗಳು 30/1 ಮತ್ತು 25/1 ಕ್ಕೆ ಸ್ವತ್ತುಗಳಿಗೆ ಸಂಬಂಧಪಟ್ಟಿರುತ್ತವೆ. ಸದರಿ ಸ್ವತ್ತುಗಳು ದಾವಾ ಷೆಡ್ಯೂಲ್ ಸ್ವತ್ತುಗಳಾಗಿರುವುದಿಲ್ಲ ಎಂದರೆ ಸರಿ. ದಿನಾಂಕಃ 03.08.1995 ರ ಕ್ರಯಪತ್ರವನ್ನು ಗುರ್ರಪ್ಪ, ಸುಬ್ಬಯ್ಯ, ಭೀಮಪ್ಪ ಮತ್ತು ಶಂಕರಪ್ಪ ರವರು ಆದಿಶೇಷಪ್ಪ ಮತ್ತು ಗೋವಿಂದಪ್ಪ ರವರ ಪತ್ನಿಯರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಮಾರಾಟಗಾರರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಪ್ರಸ್ತುತ ದಾವೆ ಸ.ನಂ. 51 ಮತ್ತು 55 ಕ್ಕೆ ಸಲ್ಲಿಸಲಾಗಿದೆ. ದಿನಾಂಕಃ 03.08.1995 ರ ಕ್ರಯಪತ್ರವನ್ನು 34 ವರ್ಷಗಳ ಹಿಂದೆ ಬರೆದುಕೊಡಲಾಗಿದೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನಾನು ಈ ಹಿಂದೆ ಪ್ರಶ್ನೆ ಮಾಡಿಲ್ಲ. ಪ್ರಸ್ತುತ ಕ್ರಯಪತ್ರದಂತೆ ಆದಿಶೇಷಪ್ಪ ಮತ್ತು ಗೋವಿಂದಪ್ಪ ರವರ ಪತ್ನಿಯ ಹೆಸರಿಗೆ ಖಾತೆ ಪಹಣಿ ವರ್ಗಾವಣೆಯಾಗಿದ್ದು ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

( 6, 7, 11 ಮತ್ತು 12ನೇ ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.